Ex ನಂಃ 116/2023
ಆರ್ ಡಬ್ಲ್ಯು: 2

<u>ದಿನಾಂಕಃ **06-02-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಪಾಟೀ ಸವಾಲುಃ **DHR** ರ ಪರ ಶ್ರೀ ಡಿ ಆರ್ ಸಿ ವಕೀಲರ ಪರವಾಗಿ ಶ್ರೀ ಬಿ ಸಿ ವಿ ಎಸ್ ವಕೀಲರಿಂದಃ</u>

ನಾನು ಶ್ರೀರಾಮ್ ಫೈನಾನ್ಸ್ ನಲ್ಲಿ 8 ವರ್ಷಗಳಿಂದ ಕೆಲಸ ನಿರ್ವಹಿಸುತ್ತಾ ಇರುತ್ತೇನೆ. ನಾನು ಜೂನ್ 2017 ರಿಂದ ಇಲ್ಲಿಯವರೆಗೆ ಶ್ರೀರಾಮ್ ಫೈನಾನ್ಸ್ ನಲ್ಲಿ ಕೆಲಸ ನಿರ್ವಹಿಸುತ್ತಾ ಇರುತ್ತೇನೆ. ನಾನು 2017 ರಿಂದ 2022 ರ ವರೆಗೆ ಶ್ರೀರಾಮ್ ಟ್ರಾನ್ಸ್ ಪೋರ್ಟ್ ಕಂಪನಿಯಲ್ಲಿ ಕೆಲಸ ನಿರ್ವಹಿಸುತ್ತಾ ಇರುತ್ತೇನೆ. 2022 ರಲ್ಲಿ ಶ್ರೀರಾಮ ಫೈನಾನ್ಸ್ ಕಂಪನಿಂ ಶ್ರೀರಾಮ ಟ್ರಾನ್ಸ್ ಪೋರ್ಟ್ ಕಂಪನಿಯಲ್ಲಿ ಮರ್ಜ್ ಆಗಿರುತ್ತದೆ. ನಾನು ಶ್ರೀರಾಮ ಸಿಟಿ ಯುನಿಯನ್ ಫೈನಾನ್ಸ್ ನಲ್ಲಿ ಯಾವತ್ತೂ ಕೆಲಸ ಮಾಡಿರುವುದಿಲ್ಲ. ಶ್ರೀರಾಮ ಸಿ ಟಿ ಯುನಿಯನ್ ಫೈನಾನ್ಸ್ ಮತ್ತು ಶ್ರೀರಾಮ ಟ್ರಾನ್ಸ್ ಪೋರ್ಟ್ ಫೈನಾನ್ಸ್ ಕಂಪನಿ 2022 ರಲ್ಲಿ ಶ್ರೀರಾಮ್ ಫೈನಾನ್ಸ್ ನಲ್ಲಿ ಮರ್ಜ್ ಆಗಿರುತ್ತದೆ. 2022 ರವರೆಗೆ ಶ್ರೀರಾಮ್ ಫೈನಾನ್ಸ್ ಎಂದು ಇರಲಿಲ್ಲ ಎಂದರೆ ಸರಿ.

2. ನಾನು ಶ್ರೀರಾಮ್ ಫೈನಾನ್ಸ್ ನಿಂದ ಅಥೋರೈಸೇಷನ್ ಹೊಂದಿದ ಬಗ್ಗೆ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ದಿನಾಂಕ 21.11.2023 ರಂದು ನಾನು ಶ್ರೀರಾಮ್ ಫೈನಾನ್ಸ್ ನಿಂದ ಅಥೋರೈಸೇಷನ್ ಪಡೆದುಕೊಂಡಿರುತ್ತೇನೆ. ನಿಆರ್ -5 ರಲ್ಲಿ ಈ ಕೇಸಿನ ಬಗ್ಗೆ ಸಾಕ್ಷಿ ನುಡಿಯಲು ನನಗೆ ನಿರ್ಧಿಷ್ಟವಾಗಿ ಅಧಿಕಾರ ನೀಡಿರುವ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ನಾನು ಬಿ.ಕಾಂ., ಪದವಿಧರ ಇರುತ್ತೇನೆ. ಸಾಮಾನ್ಯವಾಗಿ ವಿಶೇಷ ಅಧಿಕಾರ ಪತ್ರವನ್ನು ಒಂದು ನಿರ್ಧಿಷ್ಟ ಉದ್ದೇಶಕ್ಕಾಗಿ ನೀಡುತ್ತಾರೆ ಎಂದರೆ ಸರಿ. ಅದೇ ರೀತಿ ಸಾಮಾನ್ಯ ಅಧಿಕಾರ ಪತ್ರವನ್ನು ಎಲ್ಲಾ ಉದ್ದೇಶಕ್ಕಾಗಿ ನೀಡುತ್ತಾರೆ ಎಂದರೆ ಸರಿ. ಯಾವುದೇ ಒಂದು ಕೇಸು ದಾಖಲಾದ ನಂತರ ನಮ್ಮ ಕಂಪನಿಯವರು ಅಧಿಕಾರ ಪತ್ರವನ್ನು ಕೊಡಬೇಕಾಗುತ್ತದೆ ಎಂದರೆ ಸರಿಯಲ್ಲ.

3. ಶ್ರೀರಾಮ್ ಫೈನಾನ್ಸ್ ನವರು ನನಗೆ ನೀಡಿದ ಅಧಿಕಾರ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಆದರೆ ಮುಂದೆ ಹಾಜರುಪಡಿಸುತ್ತೇನೆ. ನನಗೆ ಶ್ರೀರಾಮ್ ಫೈನಾನ್ಸ್ ನವರು ಅಧಿಕಾರ ಪತ್ರ ನೀಡದಿರುವ ಕಾರಣ ಈ ಅರ್ಜಿಯಲ್ಲಿ ನಾನು ಸಾಕ್ಷ್ಯಾ

ನುಡಿಯಲು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಅಧಿಕಾರ ಪತ್ರ ನೀಡಲು ಎಂ.ಡಿ ಮತ್ತು ಜಾಯಿಂಟ್ ಡೈರೆಕ್ಟ್ ಅಧಿಕಾರ ಹೊಂದಿರುತ್ತಾರೆ. ಶ್ರೀರಾಮ್ ಫೈನಾನ್ಸ್ ನವರು ಎಂ.ಡಿ ಮತ್ತು ಜಾಯಿಂಟ್ ಡೈರೆಕ್ಟರ್ ನವರು ನೀಡಿದ ಅಧಿಕಾರ ಪತ್ರವನ್ನು ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಡಿಕ್ರಿದಾರರು ಈ ಅರ್ಜಿ ಸಲ್ಲಿಸುವ ಕಾಲಕ್ಕೆ ಶ್ರೀರಾಮ್ ಟ್ರಾನ್ಸ್‌ಪೋರ್ಟ್ ಮತ್ತು ಶ್ರೀರಾಮ ಸಿಟಿ ಯುನಿಯನ್ ಫೈನಾನ್ಸ್ ಅಸ್ತಿತ್ವದಲ್ಲಿ ಇರಲಿಲ್ಲ ಎಂದರೆ ಸಾಕ್ಷಿ ಎರಡು ಮರ್ಜ್ ಅಗಿ ಶ್ರೀರಾಮ್ ಫೈನಾನ್ಸ್ ಆಗಿದ್ದವು ಎಂದು ಉತ್ತರಿಸುತ್ತಾರೆ. ನಾವು ವಕಾಲತ್ ಸಲ್ಲಿಸಿಸುವ ಕಾಲಕ್ಕೆ ಶ್ರೀರಾಮ್ ಫೈನಾನ್ಸ್ ಅಸ್ತಿತ್ವದಲ್ಲಿ ಇದ್ದು ಶ್ರೀರಾಮ್ ಟ್ರಾನ್ಸ್ ಪೋರ್ಟ್ ಅಸ್ತಿತ್ವದಲ್ಲಿ ಇರಲಿಲ್ಲ ಎಂದರೆ ಸರಿ. ನಾನು ಶ್ರೀರಾಮ್ ಟ್ರಾನ್ಸ್ ಪೋರ್ಟ್ ಫೈನಾನ್ಸ್ ನವರು ನೀಡಿದ ವಕಾಲತ್ ಅನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಆ ಕಾರಣದಿಂದ ನಾನು ಈ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ಅಧಿಕಾರ ಹೊಂದಿರುವುದಿಲ್ಲ ಎಂರದೆ ಸರಿಯಲ್ಲ.

4. ಟಿ.ಸಿ.ಎಸ್ ಟ್ರಾನ್ಸ್ ಪೋರ್ಟ್ ಕಂಪನಿಯವರು ಸರ್ವೆ ನಂಬರ್ 97 ಕ್ಕೆ ಸಂಬಂಧಪಟ್ಟಂತೆ ಸಾಲ ಪಡೆದಿರುತ್ತಾರೆ. ಸದರಿ 1 ಎಕರೆ 10 ಗುಂಟೆಗೆ ಚೆಕ್ಕುಬಂಧಿ ಪೂರ್ವ, ಪಶ್ಚಿಮ ಹಾಗೂ ಉತ್ತರಕ್ಕೆ ಸರ್ವೆ ನಂಬರ್ 28 ಅನಂತ ಇವರ ಆಸ್ತಿ ದಕ್ಷಿಣಕ್ಕೆ ಕೊಪ್ಪ ಸಿದ್ದರಮಠ ರಸ್ತೆ ಇರುತ್ತದೆ. ಟಿ ಸಿ ಎಸ್ ಸಂಸ್ಥೆಯವರು ನಮ್ಮ ಕಂಪನಿಗೆ memorandum of deposit of title deeds ಕೊಟ್ಟಿದ್ದು ಅದರ ಪ್ರತಿಯನ್ನು ನಾನು ಹಾಜರುಪಡಿಸಿರುವುದಿಲ್ಲ. ನನಗೆ memorandum of deposit of title deeds ನ ತಿದ್ದುಪಡಿ ಪತ್ರ ಹಾಗೂ ಇನ್ನೊಂದು memorandum of deposit of title deeds ನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಅಮಲ್ಜಾರಿ ಅರ್ಜಿಯಲ್ಲಿ ಆಸ್ತಿಯ ಚೆಕ್ಕುಬಂಧಿ ಮತ್ತು ವಿಸ್ತೀರ್ಣಕ್ಕೂ ಹಾಗೂ ನಾನು ಹೇಳಿದ ವಿಸ್ತೀರ್ಣಕ್ಕೂ ಮತ್ತು ಚೆಕ್ಕುಬಂಧಿಗೆ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ಅಮಲ್ಜಾರಿ ಅರ್ಜಿಯ ಆಸ್ತಿಯ ಉತ್ತರಕ್ಕೆ ಚೆಕ್ಕುಬಂಧಿ ಸರ್ವೆ ನಂಬರ್ 97 ಎಂದು ತೋರಿಸಿರುತ್ತಾರೆ ಎಂದರೆ ಸರಿ. ಸರ್ವೆ ನಂಬರ್ 97 ಈಗ ಕೃಷಿ ಜಮೀನಾಗಿ ಉಳಿದಿರುವುದಿಲ್ಲ ಎಂದರೆ ಸಾಕ್ಷಿ ನೋಡಿ ಹೇಳಬೇಕಾಗುತ್ತದೆ ಎಂದು ಉತ್ತರಿಸುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ